ದಿನಾಂಕಃ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

4. ನಾನು ಸ್ಥಳಕ್ಕೆ ಹೋಗುವ ಮೊದಲೇ ಪೊಲೀಸರು ಬರೆದುಕೊಂಡಿದ್ದರು. ಪ್ರಾಸಾ.1 ರವರ ತಾಯಿ ಕೊಲೆಯಾಗಿದ್ದ ಬಗ್ಗೆ ಸಾಕ್ಷಿಗೆ ಬೇಕು ಸಹಿ ಮಾಡಿ ಎಂದು ಹೇಳಿದ್ದರಿಂದ ನಾನು ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಆ ದಿನ ಪೊಲೀಸರು ಸುಪ್ರಿಂ ಮೆಡಿಕಲ್ಸ್ ಹತ್ತಿರ ತೆಗೆದ ಫೋಟೋ ಅದೇ ಎಂದು ನುಡಿದಿರುತ್ತಾರೆ.

5. ಸಾಕ್ಷಿಗೆ ಈಗಾಗಲೇ ನಿಪಿ.5 ಎಂದು ಗುರುತಿಸಲ್ಪಟ್ಟಿರುವ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು

ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು.

6. ಪೊಲೀಸರು ನನ್ನ ಸಮಕ್ಷಮ ಏನನ್ನೂ ತೆಗೆದುಕೊಂಡಿಲ್ಲ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ನಿಪಿ.5 ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ಸಾಕ್ಷಿಗೆ ನೀಡಿದ್ದಾರೆ ಎನ್ನಲಾದ ನೋಟೀಸಾಗಿದ್ದು ಅದನ್ನು ನಿಪಿ.7 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ಪೊಲೀಸರು ಹೇಳಿದ ಮೇರೆಗೆ ದಿನಾಂಕ 10.05.2024 ರಂದು ಚಿಕ್ಕಮಗಳೂರಿನ ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ಸ್ ಬಳಿ ಮಾಡಿದ್ದೇನೆ.

7. ಸಾಕ್ಷಿಗೆ ಈಗಾಗಲೇ ಮು.ಮಾ.1 ರಿಂದ 3 ಎಂದು ಗುರುತಿಸಲ್ಪಟ್ಟಿರುವ ಸಾದಾ ಬ್ಯಾಂಡೇಜ್ ಬಟ್ಟೆಯ ತುಂಡು ಮತ್ತು ರಕ್ತದ ಕಲೆಗಳನ್ನು ಸಂಗ್ರಹಿಸಿದ ಬ್ಯಾಂಡೇಜ್ ಬಟ್ಟೆಯ ತುಂಡುಗಳನ್ನು ತೋರಿಸಲಾಗಿ ಸಾಕ್ಷಿಯು ನಾನು ಅವುಗಳನ್ನು ನೋಡಿದ್ದೇನೆ ಆದರೆ ನಾನು ಸ್ಥಳಕ್ಕೆ ಹೋಗುವ ಮೊದಲೇ ಪೊಲೀಸರು ಅವುಗಳನ್ನು ಸಂಗ್ರಹಿಸಿದ್ದರು ಎನ್ನುತ್ತಾರೆ. ಮು.ಮಾ.1 ರಿಂದ 3 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮು.ಮಾ.1(ಬಿ), 2(ಬಿ), 3(ಬಿ), ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

8. ನೀವು ಚಿಕ್ಕಮಗಳೂರಿನ ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ಸ್ ಬಳಿ ಬಂದಾಗ ಪೊಲೀಸರು ನಿಮಗೆ ಮತ್ತು ಚಾಸಾ.5 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನಿಪಿ.7 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದರೆ ಸರಿ. ಸದರಿ ಸುಪ್ರಿಂ ಮೆಡಿಕಲ್ಸ್ ಹತ್ತಿರ ಪುಟ್ ಪಾತ್ ರಸ್ತೆಯಲ್ಲಿ ಫ್ರಾಸಾ.1 ರವರು ನಿಮ್ಮ ಮತ್ತು ಚಾಸಾ.5 ರವರ ಸಮಕ್ಷಮ ಪೊಲೀಸರಿಗೆ ಸ್ಥಳವನ್ನು ತೋರಿಸಿ ಆರೋಪಿ ತನ್ನ ತಾಯಿ ಕನಕರವರ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದರು ಎಂದರೆ ಸರಿ. ಸದರಿ ಸ್ಥಳದಲ್ಲಿದ್ದ ರಕ್ತದ ಕಲೆಗಳನ್ನು ಪೊಲೀಸರು ನಿಮ್ಮ ಸಮಕ್ಷಮ ಬ್ಯಾಂಡೇಜ್ ಬಟ್ಟೆಯ ತುಂಡುಗಳಿಂದ ಹೊರೆಸಿ ಸಂಗ್ರಹಿಸಿದ್ದಾರೆ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗುವ ಮೊದಲೇ ಸಂಗ್ರಹಿಸಿದ್ದರು ಎನ್ನುತ್ತಾರೆ. ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ನಿಪಿ.5 ರಂತೆ ನಿಮ್ಮ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ನಿಮ್ಮ ಸಹಿಯನ್ನು ಪಡೆದಿದ್ದಾರೆ ಎಂದರೆ ಸಾಕ್ಷಿ ಸಹಿ ಪಡೆದಿದ್ದಾರೆ ಆದರೆ ನಾನು ಅಲ್ಲಿಗೆ ಹೋಗುವ ಮೊದಲೇ ಎಲ್ಲಾ ಆಗಿ ಹೋಗಿತ್ತು ಎನ್ನುತ್ತಾರೆ.

9. ನಾನು ಪಿ ಯು ಸಿ ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುತ್ತದೆ. ನೀವು

ಯಾವುದೇ ದಾಖಲೆಯಲ್ಲಿ ಬರೆದಿರುವ ವಿಚಾರಗಳನ್ನು ಓದದೇ ತಿಳಿದುಕೊಳ್ಳದೇ ಸಹಿ ಮಾಡುವುದಿಲ್ಲ ಎಂದರೆ ಸರಿ.

10. ನಿಮ್ಮ ಸಮಕ್ಷಮ ಪೊಲೀಸರು ಮಹಜರ್ ಜರುಗಿಸಿ ಮು.ಮಾ.1 ರಿಂದ 3 ಅನ್ನು ಅಮಾನತುಪಡಿಸಿಕೊಂಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ಆತನಿಗೆ ಸಹಾಯ ಮಾಡಲು ನೀವು ಅಲ್ಲಿಗೆ ಹೋಗುವ ಮೊದಲೇ ಎಲ್ಲಾ ಮುಗಿದುಹೋಗಿತ್ತು ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

11. ಫ್ರಾಸಾ.1 ಮತ್ತು ಚಾಸಾ.5 ರವರು ನಿಮ್ಮ ಊರಿನವರು ಮತ್ತು ನಿಮ್ಮ ಸ್ನೇಹಿತರು ಎಂದರೆ ಸರಿ. ಫ್ರಾಸಾ.1 ರವರು ಕರೆದಿದ್ದರಿಂದ ನಾನು ಆ ದಿನ ಸ್ಥಳಕ್ಕೆ ಹೋಗಿದ್ದೆನು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಎಂದಿಗೂ ಪೊಲೀಸ್ ಠಾಣೆಗೆ ಹೋಗಿಲ್ಲ. ಮು.ಮಾ.1 ರಿಂದ ಮು.ಮಾ.3 ವಸ್ತುಗಳನ್ನು ಇರಿಸಲಾಗಿರುವ ಕವರ್ ಗಳನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿದ್ದೀರಿ ಎಂದರೆ ಸರಿ.

12. ನಿಪಿ.5 ಮತ್ತು ನಿಪಿ.7 ರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ನೀವು ಚಿಕ್ಕಮಗಳೂರಿನ ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ಸ್ ಬಳಿ ಬಂದಾಗ ಪೊಲೀಸರು ನಿಮಗೆ ಮತ್ತು ಚಾಸಾ.5 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನಿಪಿ.7 ರಂತೆ ನೋಟೀಸನ್ನು ಜಾರಿ ಮಾಡಿದ್ದಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಸುಪ್ರಿಂ ಮೆಡಿಕಲ್ಸ್ ಹತ್ತಿರ ಪುಟ್ ಪಾತ್ ರಸ್ತೆಯಲ್ಲಿ ಫ್ರಾಸಾ.1 ರವರು ನಿಮ್ಮ ಮತ್ತು ಚಾಸಾ.5 ರವರ ಸಮಕ್ಷಮ

ಪೊಲೀಸರಿಗೆ ಸ್ಥಳವನ್ನು ತೋರಿಸಿ ಆರೋಪಿ ತನ್ನ ತಾಯಿ ಕನಕರವರ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ಫ್ರಾಸಾ.1 ರವರು ನಿಮ್ಮ ಸ್ನೇಹಿತನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ